ದಿಃ 16.04.2026

**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1131/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಸಂತಕುಮಾರ್ | ಪ್ರಾ ಸಾಃ 6 |
| ತಂದೆಯ/ಗಂಡನ ಹೆಸರು | : | ದೊಡ್ಡರುದ್ರಪ್ಪ | ಚಾಸಾಃ 12 |
| ವಯಸ್ಸು | : | 62 ವರ್ಷ | |
| ಕೆಲಸ | : | ನಿವೃತ್ತ ಎ.ಎಸ್.ಐ | ಸಾ ಪ್ರ ಬೋ |
| ವಾಸ | : | ದುಮ್ಮಿ ಗ್ರಾಮ | ದಿಃ16.04.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನಾನು 2021 ರಿಂದ 2025 ರವರೆಗೆ ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 13.09.2023 ರಂದು ಚಾಸಾ-11 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ಅಲ್ಲಿಯವರೆಗಿನ ತನಿಖೆಯನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-4 ಮತ್ತು 5 ರವರ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿತನು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ನನ್ನ ಸಮಕ್ಷಮ ಹಾಜರಾಗಿದ್ದು, ದಸ್ತಗಿರಿ ಮಾಡಿ ಭದ್ರತೆಯನ್ನು ಪಡೆದುಕೊಂಡಿರುತ್ತೇನೆ. ಅದೇ ಸಮಯದಲ್ಲಿ ಆರೋಪಿತನಿಂದ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಸ್ವ-ಇಚ್ಛಾ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಮತ್ತು ಆರೋಪಿತನ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ದಿನಾಂಕ 17.09.2023 ರಂದು ಚಾಸಾ-8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 04.10.2023 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡು ಆರೋಪಿತನ ವಿರುದ್ಧ ಆರೋಪ ರುಜುವಾತದ ಹಿನ್ನೆಲೆಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ರಾಸಾಯನಿಕ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿ

ದಿಃ 16.04.2026

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ.ಎಸ್.ವಿ.ಕೆ ವಕೀಲರಿಂದ</u>**

3. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಮರುಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತನು ನನ್ನ ಸಮಕ್ಷಮ ಯಾವುದೇ ಸ್ವ-ಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತನು ನಮ್ಮ ವಶದಲ್ಲಿದ್ದಾಗ ಆರೋಪಿತನಿಂದ ಬಲವಂತವಾಗಿ ಸ್ವ-ಇಚ್ಛಾ ಹೇಳಿಕೆಗೆ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಹೊರತುಪಡಿಸಿ ಇತರೆ ಯಾವುದೇ ಸಾಕ್ಷ್ಯವನ್ನು ಕ್ರೂಡೀಕರಿಸಿಲ್ಲ. ಆರೋಪಿತನ ವಿರುದ್ಧ ಯಾವುದೇ ಆರೋಪ ರುಜುವಾತಾಗದಿದಾಗ್ಯೂ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.